# ವಾರ್ತಾ ವಿಶ್ಲೇಷಣೆ

## ಶೂನ್ಯಾನ್ವೇಷಣೆ

ಅಸದೇವೇದಮಗ್ರ ಆಸೀತ್.... ತಸ್ಮಾದಸತಃ ಸಜ್ಜಾಯತ— 'ಪ್ರಾರಂಭದಲ್ಲಿ ಅಸತ್ತೇ ಇತ್ತು. ಆ ಅಸತ್ತಿನಿಂದ ಸತ್ ಉಂಟಾಯಿತು'(ಛಾಂ.ಉ. ೬-೨-೧) ಎಂದು ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಿ, ಕೂಡಲೆ 'ಅದು ಸಾಧ್ಯವಿಲ್ಲ, ಅಸತ್ತಿನಿಂದ ಸತ್ ಉಂಟಾಗುವುದು ಹೇಗೆ'—ಎಂದು ಆ ಉಪನಿಷತ್ತು ಕೇಳುತ್ತದೆ. 'ಆದ್ದರಿಂದ ಸದ್ವಸ್ತುವೇ ಪ್ರಾರಂಭದಲ್ಲಿತ್ತು' ಎಂದು ಅದು ತಿಳಿಸುತ್ತದೆ. ಶೂನ್ಯವೇ ಸತ್ಯವೆಂದು ಬೌದ್ಧಧರ್ಮದ ಶೂನ್ಯವಾದಿಗಳು ಹೇಳುತ್ತಾರೆ. ಸತ್ತೂ ಇರಲಿಲ್ಲ, ಅಸತ್ತೂ ಇರಲಿಲ್ಲ ಎಂದು ನಾಸದೀಯ ಸೂಕ್ತ ಹೇಳುತ್ತದೆ.

ದೇಶ (*space*) ಶೂನ್ಯವೇ ಅಥವಾ ವಸ್ತುವೇ ಎಂಬುದು ವೈಜ್ಞಾನಿಕ ಕ್ಷೇತ್ರದಲ್ಲೂ ಚರ್ಚೆಯ ಅಂಶವಾಗಿದೆ. ಈ ಶೂನ್ಯವೇ ಅನೇಕರ ಮನಸ್ಸನ್ನು ತುಂಬಿಕೊಂಡಿದೆ! ಈ ವಿಷಯವನ್ನು ಕುರಿತು ಅನೇಕ ಗ್ರಂಥಗಳು ಹುಟ್ಟಿಕೊಂಡಿವೆ: *The Nothing That is* ; *Zero : The Biography of a Dangerous Idea* ; *The Book of Nothing* ಇವೇ ಮುಂತಾದುವು. ಅಭಾವವೇ ಇಷ್ಟೊಂದು ಭಾವನೆಗಳಿಗೆ ಕಾರಣವಾಗಿರುವಾಗ 'ಅಸತ್ತಿನಿಂದ ಸತ್ ಉಂಟಾಯಿತು' ಎನ್ನುವ ಹೇಳಿಕೆ ಅರ್ಥಪೂರ್ಣವಾಗಿ ಕಂಡುಬರುತ್ತದೆ. ಇತ್ತೀಚೆಗೆ ಪ್ರಕಟವಾದ ಇದೇ ವಿಷಯಕ್ಕೆ ಸಂಬಂಧಿಸಿದ *The Hole in the Universe* ಎಂಬ ಕೆ.ಸಿ.ಕೋಲ್ ಅವರ ಗ್ರಂಥ ತುಂಬ ಪ್ರಸಿದ್ಧವಾದುದು. ಅವರ ಪ್ರಕಾರ ವಸ್ತುಗಳು ಮತ್ತು ನಾವು ದೇಶದಲ್ಲಿ ಇರುವುದಲ್ಲ, ನಾವೇ ಆ ದೇಶವಾಗಿದ್ದೇವೆ. ಎಲ್ಲವೂ ಆ ದೇಶದ ಅಂಗಗಳು. ದೇಶದ ಬಗ್ಗೆ ನೂತನ ಸಿದ್ಧಾಂತದ ಪ್ರಕಾರ (*string theory*) ಈ ಪ್ರಪಂಚದಲ್ಲಿ ಎಲ್ಲವೂ ಒಂದಕ್ಕೊಂದು ಹೆಣೆಯಲ್ಪಟ್ಟಿವೆ. ಇಡೀ ವಿಶ್ವ ಒಂದು ಜಾಲ (*Network*). ಇಲ್ಲಿ ಪೂರ್ಣ ಪ್ರತ್ಯೇಕ ವಸ್ತುವೆಂಬುದಿಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, ನಮ್ಮ ನಿಮ್ಮ ದೇಹಗಳೆಲ್ಲ ಅನಂತ ಭೌತಸಾಗರದ ವಿವಿಧ ಅಂಶಗಳು, ದೈಹಿಕವಾಗಿಯೂ ನಮಗೆ ಪ್ರತ್ಯೇಕ ಅಸ್ತಿತ್ವವಿಲ್ಲ.

ಆದ್ದರಿಂದ ಶೂನ್ಯ ನಿಜವಾಗಿ ಶೂನ್ಯವಲ್ಲ. ನಮಗೆ ದೃಶ್ಯ ಜಗತ್ತು ಶೂನ್ಯವಾದಾಗ ಈ ಶೂನ್ಯ ಮಾನ್ಯವಾಗುತ್ತದೆ. ಆಗ 'ಯಾವುದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತಾಗುತ್ತದೆ' (ಮುಂಡಕೋಪನಿಷತ್, ೧-೧-೩) ಎಂದು 'ಶೂನ್ಯವನ್ನು ಅರಸಿಕೊಂಡು ಹೋಗುವಂತಾಗುತ್ತದೆ.' ಇದೇ ಭಾವನೆಯನ್ನು ಪ್ರತಿಬಿಂಬಿಸುವ ಭೌತಶಾಸ್ತ್ರಜ್ಞನ ಹೇಳಿಕೆಯೊಂದು ಕೋಲ್ ಅವರ ಪುಸ್ತಕದಲ್ಲಿ ಬರುತ್ತದೆಯಂತೆ : 'ಯಾರು ಶೂನ್ಯದ ಬಗ್ಗೆ ಎಲ್ಲವನ್ನೂ ತಿಳಿಯುತ್ತಾನೊ ಅವನು ಎಲ್ಲವನ್ನೂ ತಿಳಿಯುತ್ತಾನೆ.' (*Anybody who knows all about nothing knows everything*).

☆

## ಮಾಹಿತಿಯ ಇತಿಮಿತಿ

ನಾವು ಎರಡು ಸ್ಫೋಟಗಳ ಬಗ್ಗೆ ಹೆಚ್ಚು ಮಾತನಾಡುತ್ತೇವೆ: ಜನಸಂಖ್ಯಾ ಸ್ಫೋಟ ಮತ್ತು ಮಾಹಿತಿ ಸ್ಫೋಟ. ಅಣು ಸ್ಫೋಟಕ್ಕಿಂತ ಈ ಎರಡು ಸ್ಫೋಟಗಳು ಮಾನವಕೋಟಿಗೆ ಹೆಚ್ಚು ಮಾರಕವಾಗಿರುವಂತೆ ಕಂಡುಬರುತ್ತದೆ. ಜನಸಂಖ್ಯಾ ಸ್ಫೋಟ ಮಾರಕವಾಗಿರುವುದು ಸ್ವಾಭಾವಿಕವೇ. ಆದರೆ ಮಾಹಿತಿ ಸ್ಫೋಟ ಹೇಗೆ ಮಾರಕವಾಗುತ್ತದೆ?

ಮಾಹಿತಿಗಳು ಹೆಚ್ಚುತ್ತಿರುವಂತೆಯೇ ಮಾಹಿತಿಗಳನ್ನು ಒದಗಿಸುವ ಮಾಧ್ಯಮಗಳು ಅಧಿಕವಾಗುತ್ತಿವೆ. ಮಾನವನ ಚಟುವಟಿಕೆಗಳು—ಭೌತಿಕ ಮತ್ತು ಮಾನಸಿಕ—ಹೆಚ್ಚಾದಂತೆಲ್ಲ ಮಾಹಿತಿಗಳೂ ಸ್ವಾಭಾವಿಕವಾಗಿಯೇ ಅಧಿಕವಾಗುತ್ತವೆ. ನಮಗೆ ತಿಳಿದಿರುವುದಕ್ಕಿಂತ ತಿಳಿಯದಿರುವ ಮಾಹಿತಿಗಳೇ ಅತ್ಯಧಿಕ. ನಮಗೆ ತಿಳಿಯದಿರುವ ಮಾಹಿತಿಯ ಮೊತ್ತ ಎರಡು ಹೆಕ್ಸಾಬೈಟ್ ಎಂದು ಅಂದಾಜು ಮಾಡಲಾಗಿದೆ. ಒಂದು ಹೆಕ್ಸಾಬೈಟ್ ಸುಮಾರು ಒಂದು ಬಿಲಿಯನ್ ಬಿಲಿಯನ್ ಬೈಟ್‌ಗಳಿಗೆ ಸಮ—ಅಂದರೆ *The Economist* ಎಂಬ ಗ್ರಂಥದ ೨೦ ಬಿಲಿಯನ್ ಪ್ರತಿಗಳಿಗೆ ಸಮ. ಪ್ರತಿ ವರ್ಷ ವ್ಯಕ್ತಿಗಳು ಜಗತ್ತಿನಾದ್ಯಂತ ೭೪೦,೦೦೦ ಟೆರಾಬೈಟ್ (ಒಂದು ಸಾವಿರ ಬಿಲಿಯನ್ ಬೈಟ್) ಮಾಹಿತಿಗಳನ್ನು ಸೃಷ್ಟಿಸಿ ಶೇಖರಿಸುತ್ತಾರಂತೆ. ಸುಮಾರು ೧.೪ ಮಿಲಿಯನ್ ಟೆರಾಬೈಟ್ ಮಾಹಿತಿಗಳು ಡಿಜಿಟಲ್ ರೂಪದಲ್ಲಿ ಪ್ರತಿ ವರ್ಷ ಶೇಖರವಾಗುತ್ತವಂತೆ. ಇವಲ್ಲದೆ ಇ-ಮೇಲ್, ಟೆಲಿಫೋನ್ ಮುಂತಾದುವುಗಳ ಮೂಲಕ ಪ್ರತಿವರ್ಷ ಬರುವ ಮಾಹಿತಿಗಳು ೫೭೬,೦೦೦ ಟೆರಾಬೈಟ್ಸ್‌ಗಳಿಗೂ ಅಧಿಕ. ಇನ್ನು ಪುಸ್ತಕಗಳ ವಿಚಾರ. ಪ್ರತಿವರ್ಷ ಪ್ರಪಂಚದಲ್ಲಿ ಸುಮಾರು ೧ ಮಿಲಿಯನ್ ಪುಸ್ತಕಗಳು ಪ್ರಕಟವಾಗುತ್ತಿವೆಯಂತೆ!

ಆದರೆ ಆಶ್ಚರ್ಯವೇನೆಂದರೆ ಮಾನವಕೋಟಿಯು ಹೆಚ್ಚು ಹೆಚ್ಚು ಮಾಹಿತಿಗಳನ್ನು ಉತ್ಪತ್ತಿ ಮಾಡುತ್ತಿದ್ದರೂ ಅವನ್ನು ಗ್ರಹಿಸುವ ಸಾಮರ್ಥ್ಯ ಮಾತ್ರ ಅಧಿಕವಾಗಿಲ್ಲವಂತೆ—ಕೊನೆಯ ಪಕ್ಷ ಸಂಯುಕ್ತ ಸಂಸ್ಥಾನಗಳಲ್ಲಿ ಎಂಟು ವರ್ಷಗಳ ಹಿಂದೆ ಎಷ್ಟಿತ್ತೊ ಈಗಲೂ ಅಷ್ಟೇ ಇದೆಯಂತೆ.

ಆಹಾರ ಪದಾರ್ಥಗಳು ಜಾಸ್ತಿಯಾದಂತೆ ನಮ್ಮ ಉಣ್ಣುವ ಸಾಮರ್ಥ್ಯ ಜಾಸ್ತಿಯಾಗುವುದಿಲ್ಲ. ಉಣ್ಣುವ ಸಾಮರ್ಥ್ಯವಿದ್ದರೂ ಜೀರ್ಣಿಸಿಕೊಳ್ಳುವ ಸಾಮರ್ಥ್ಯವಿಲ್ಲದಿದ್ದರೆ ಪ್ರಯೋಜನವಿಲ್ಲ. ಹಾಗೆಯೇ ಎಷ್ಟೇ ಮಾಹಿತಿ ಇದ್ದರೇನು. ನಮ್ಮ ಜೀವನಕ್ಕೆ ಎಷ್ಟು ಉಪಯುಕ್ತವೊ ಅಷ್ಟಕ್ಕೆ ಮಾತ್ರ ಬೆಲೆ. ನಾವು ಪಡೆದ ಮಾಹಿತಿಯನ್ನು ಪ್ರಾಯೋಗಿಕವಾಗಿ ಉಪಯೋಗಿಸಿಕೊಂಡಷ್ಟೂ ಜ್ಞಾನಾರ್ಜನೆಯ ಸಾಮರ್ಥ್ಯವೂ ಅಧಿಕವಾಗುತ್ತದೆ. ಹಾಗಿಲ್ಲದಿದ್ದರೆ 'ತಿಳಿದೂ ತಿಳಿದೂ ತಿಳಿದೂ ಕಡೆಗೇನೂ ಗೊತ್ತಿಲ್ಲ' (ಕುವೆಂಪು) ಎಂಬಂತಾಗುತ್ತದೆ.

☆